# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 256(355) |
| ಸದಸ್ಯರ ಹೆಸರು | ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 06.03.2025 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ | 2011, 2014, 2015 ಮತ್ತು 2017-18ನೇ ಸಾಲಿನ ಕರ್ನಾಟಕ ಲೋಕಸೇವಾ ಆಯೋಗವು ಕೆ.ಎ.ಎಸ್ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಯಲ್ಲಿ ಒಟ್ಟು ಎಷ್ಟು ಜನ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಯನ್ನು ಬರೆದಿದ್ದಾರೆ; ಇದರಲ್ಲಿ ಎಷ್ಟು ಜನ ಅಭ್ಯರ್ಥಿಗಳು ಕನ್ನಡ ಮಾಧ್ಯಮ ಮತ್ತು ಆಂಗ್ಲ ಮಾಧ್ಯಮದಲ್ಲಿ ಮುಖ್ಯ ಪರೀಕ್ಷೆಯನ್ನು ಬರೆದಿದ್ದಾರೆ; ಹಾಗೂ ಅಂತಿಮ ಆಯ್ಕೆ ಪಟ್ಟಿಯಲ್ಲಿ ಎಷ್ಟು ಜನ ಅಭ್ಯರ್ಥಿಗಳು ಕನ್ನಡ ಮಾಧ್ಯಮ ಮತ್ತು ಆಂಗ್ಲ ಮಾಧ್ಯಮದಲ್ಲಿ ಮುಖ್ಯ ಪರೀಕ್ಷೆಯನ್ನು ಬರೆದವರಾಗಿದ್ದಾರೆ; (ಸಂಪೂರ್ಣ ಮಾಹಿತಿ ನೀಡುವುದು) | 2011, 2014, 2015 ಮತ್ತು 2017-18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿಗಳಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಪರೀಕ್ಷೆ ಬರೆದ ಅಭ್ಯರ್ಥಿಗಳ ವಿವರವನ್ನು **ಅನುಬಂಧ**ದಲ್ಲಿ ನೀಡಿದೆ. |
| ಆ | 2023-24ನೇ ಸಾಲಿನ ಕೆ.ಎ.ಎಸ್ ಗೆಜೆಟೆಡ್ ಪ್ರೊಬೇಷನರ್ ಪೂರ್ವಭಾವಿ ಪರೀಕ್ಷೆಯ ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದ ಒಟ್ಟು ಎಷ್ಟು ಜನ ಅಭ್ಯರ್ಥಿಗಳು ಕನ್ನಡ ಮಾಧ್ಯಮ ಮತ್ತು ಆಂಗ್ಲ ಮಾಧ್ಯಮದವರಾಗಿದ್ದಾರೆ; ಈ ಕುರಿತು ಮಾಹಿತಿಯನ್ನು ಒದಗಿಸುವುದು; | ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ಪೂರ್ವಭಾವಿ ಪರೀಕ್ಷೆಯು ವಸ್ತುನಿಷ್ಠ ಬಹುಆಯ್ಕೆ ಮತ್ತು ಒಎಂಆರ್ ಮಾದರಿಯದ್ದಾಗಿರುವುದರಿಂದ ಅಭ್ಯರ್ಥಿಗಳಿಗೆ ಕನ್ನಡ ಮಾಧ್ಯಮ ಅಥವಾ ಆಂಗ್ಲ ಮಾಧ್ಯಮ ಆಯ್ಕೆ ಮಾಡಲು ನಿಯಮದಲ್ಲಿ ನಿರ್ದಿಷ್ಟ ಪಡಿಸಿರುವುದಿಲ್ಲವಾದ್ದರಿಂದ ಸದರಿ ಪ್ರಶ್ನೆಗೆ ಮಾಹಿತಿಯು ಶೂನ್ಯವಾಗಿರುತ್ತದೆ. |
| ಇ | 2024ರ ಡಿಸೆಂಬರ್ 29ರಂದು ಕೆ.ಎ.ಎಸ್ ಮರು ಪರೀಕ್ಷೆಯನ್ನು ನಡೆಸಲು ಕಾರಣವೇನು; | 2023-24ನೇ ಸಾಲಿನ ಕೆ.ಎ.ಎಸ್ ಪೂರ್ವಭಾವಿ ಪರೀಕ್ಷೆಯನ್ನು ದಿನಾಂಕ: 27-08-2024 ರಂದು ಮೊದಲ ಬಾರಿಗೆ ನಡೆಸಲಾಗಿದ್ದು, ಸದರಿ ಪೂರ್ವಭಾವಿ ಪರೀಕ್ಷೆಯ ಎರಡೂ ಪತ್ರಿಕೆಗಳ ಪ್ರಶ್ನೆಪತ್ರಿಕೆಯಲ್ಲಿ ಭಾಷಾಂತರದಲ್ಲಿ ಆದ ಲೋಪದಿಂದಾಗಿ ಮರುಪರೀಕ್ಷೆಯನ್ನು ದಿನಾಂಕ:29-12-2024ರಂದು ನಡೆಸಲಾಗಿರುತ್ತದೆ. |
| ಈ | ಮರು ಪರೀಕ್ಷೆಗೆ ತಗುಲಿರುವ ಒಟ್ಟು ವೆಚ್ಚ ಎಷ್ಟು; (ವೆಚ್ಚದ ಪೂರ್ಣ ವಿವರ ನೀಡುವುದು) | ಆಯೋಗವು ದಿನಾಂಕ: 29.12.2024ರಂದು ನಡೆಸಿರುವ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಪೂರ್ವಭಾವಿ ಮರು ಪರೀಕ್ಷೆಗೆ ತಗುಲಿರುವ ಒಟ್ಟು ವೆಚ್ಚ ಕೆಳಕಂಡಂತಿದೆ.<br><br>ಕ್ರ. ಸಂ \| ವಿವರ \| ರೂ.ಗಳಲ್ಲಿ |

| | | | |
|---|---|---|---|
| 1 | 29 ಜಿಲ್ಲೆಗಳಲ್ಲಿ ನಿಯೋಜಿಸಲಾಗಿದ್ದ ಅಧಿಕಾರಿ/ ಸಿಬ್ಬಂದಿಗಳ ಸಂಭಾವನೆ ಮೊತ್ತ | 47,62,600.00 | |
| 2 | 553 ಪರೀಕ್ಷಾ ಉಪಕೇಂದ್ರಗಳ ಸಂಭಾವನೆ ಮೊತ್ತ | 4,17,60,336.00 | |
| 3 | ಸ್ಥಳೀಯ ನಿರೀಕ್ಷಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಂಭಾವನೆ ಮೊತ್ತ | 1,27,200.00 | |
| 4 | ಪ್ರಶ್ನೆ ಪತ್ರಿಕೆ, ಓ.ಎಂ.ಆರ್. ನಾಮಿನಲ್ ಹಾಳೆಗಳ ಮುದ್ರಣ | 3,85,57,794.00 | |
| 5 | ಜಾಮರ್ಸ್ ಅಳವಡಿಸುವ ಕಾರ್ಯನಿರ್ವಹಣೆ | 1,04,52,997.00 | |
| 6 | ಫ್ರಿಸ್ಕಿಂಗ್ | 1,05,45,800.00 | |
| 7 | ಫೇಸ್ ರೆಕಗ್ನಿಷನ್ | 97,02,136.00 | |
| 8 | ಸಿ.ಸಿ.ಕ್ಯಾಮರಾ ಅಳವಡಿಸುವುದು | 1,52,59,422.00 | |
| 9 | ಲಘುವಾಹನಗಳ ಬಾಡಿಗೆ ವೆಚ್ಚ | 5,04,209.00 | |
| 10 | ಕೊರಿಯರ್ ಸೇವೆಯ ವೆಚ್ಚ | 3,36,949.00 | |
| 11 | ನಮೂನೆಗಳು ಮತ್ತು ಪರೀಕ್ಷಾ ಕೈಪಿಡಿ ಮುದ್ರಣ ವೆಚ್ಚ | 4,40,942.00 | |
| | ಒಟ್ಟು | 13,24,50,385.00 | |

| | | |
|---|---|---|
| ಉ | ಕೆಲವು ರಾಜ್ಯಗಳಲ್ಲಿ ಲೋಕಸೇವಾ ಆಯೋಗಗಳ ಮೂಲಕ ನಡೆಸುವ ಪರೀಕ್ಷೆಗಳಲ್ಲಿ ಆ ರಾಜ್ಯದ ಆಡಳಿತ ಭಾಷೆಗೆ ಮೊದಲ ಪ್ರಾಶಸ್ತ್ಯ ನೀಡಿ ಪರೀಕ್ಷೆ ನಡೆಸುತ್ತಿದ್ದು ಕರ್ನಾಟಕ ಲೋಕಸೇವಾ ಆಯೋಗವು ಯಾವುದೇ ಪರೀಕ್ಷೆ ನಡೆಸಿದರೂ ಆಂಗ್ಲ ಭಾಷೆಗೆ ಮೊದಲ ಪ್ರಾಶಸ್ತ್ಯ ನೀಡುತ್ತಿರುವುದು ಕರ್ನಾಟಕ ಸರ್ಕಾರದ ಆಡಳಿತ ಭಾಷಾ ಅನುಷ್ಠಾನ ನಿಯಮದ ಉಲ್ಲಂಘನೆಯಲ್ಲವೇ; ಈ ಕುರಿತು ಸರ್ಕಾರ ಕೈಗೊಳ್ಳಬಹುದಾದ ಸ್ಪಷ್ಟ ನಿಲುವೇನು? (ವಿವರ ನೀಡುವುದು) | ಕರ್ನಾಟಕ ಸರ್ಕಾರದ ಆಡಳಿತ ಭಾಷಾ ಅನುಷ್ಠಾನ ನಿಯಮದಂತೆ ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಎಲ್ಲಾ ಪತ್ರ ವ್ಯವಹಾರಗಳನ್ನು ಮತ್ತು ಕಡತಗಳನ್ನು ಕನ್ನಡದಲ್ಲಿಯೇ ನಿರ್ವಹಿಸಲಾಗುತ್ತಿದ್ದು, ಆಯೋಗದಿಂದ ಹೊರಡಿಸಲಾಗುವ ಅಧಿಸೂಚನೆ, ಅಭ್ಯರ್ಥಿಗಳಿಗೆ ನೀಡಲಾಗುವ ಪರೀಕ್ಷಾ ಸೂಚನೆ ಮತ್ತು ಪತ್ರಿಕಾ ಪ್ರಕಟಣೆಗಳನ್ನು ಕನ್ನಡ ಭಾಷೆಯಲ್ಲಿಯೇ ನೀಡಲಾಗುತ್ತಿದೆ. ಆಯೋಗವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆಂಗ್ಲ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲಾಗುತ್ತದೆ. ಆದ್ದರಿಂದ ಆಡಳಿತ ಭಾಷಾ ಅನುಷ್ಠಾನದಲ್ಲಿ ನಿಯಮದ ಉಲ್ಲಂಘನೆಯಾಗಿರುವುದಿಲ್ಲ. |

ಸಂಖ್ಯೆ: ಸಿಆಸುಇ 29 ಎಸ್‌ಎಸ್‌ಸಿ 2025

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

ಅನುಬಂಧ

| ವಿವರ | 2011 | | 2014 | | 2015 | | 2017-18 | |
|---|---|---|---|---|---|---|---|---|
| | ಕನ್ನಡ ಮಾಧ್ಯಮ | ಆಂಗ್ಲ ಮಾಧ್ಯಮ | ಕನ್ನಡ ಮಾಧ್ಯಮ | ಆಂಗ್ಲ ಮಾಧ್ಯಮ | ಕನ್ನಡ ಮಾಧ್ಯಮ | ಆಂಗ್ಲ ಮಾಧ್ಯಮ | ಕನ್ನಡ ಮಾಧ್ಯಮ | ಆಂಗ್ಲ ಮಾಧ್ಯಮ |
| ಮುಖ್ಯಪರೀಕ್ಷೆ ಬರೆದ ಒಟ್ಟು ಅಭ್ಯರ್ಥಿಗಳ ಸಂಖ್ಯೆ | 4185 | 2695 | 4678 | 3690 | 4600 | 3441 | 530 | 1168 |
| | 6880 | | 8368 | | 8041 | | 1698 | |
| ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ | 137 | 225 | 198 | 266 | 115 | 313 | 10 | 96 |
| ಒಟ್ಟು ಹುದ್ದೆಗಳ ಸಂಖ್ಯೆ | 362 | | 464 | | 428 | | 106 | |